**CC. No.2352 OF 2015** **DW -1**

**ಪ್ರಮಾಣೀಕರಿಸಲಾದ ದಿನಾಂಕ: 18.06.2025.**

**<u>ಪಾಟೀ ಸವಾಲು : ಫಿರ್ಯಾದುದಾರರ ಪರ ಶ್ರೀ. ಎಂ.ಸಿ.ಎನ್ ವಕೀಲರಿಂದ</u> :-**

ನಾನು ಮೇಲ್ಮನವಿಯನ್ನು ಸಲ್ಲಿಸಿದ್ದು ಅದರ ಆದೇಶದ ಪ್ರತಿ ಅಥವಾ ಅರ್ಜಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀನಿ. ಸಾಕ್ಷಿಗೆ ಕ್ರಿಮಿನಲ್ ಅಪೀಲು ನಂಬರ್ಃ 10033/2023 ರ ತೀರ್ಪಿನ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.8 ಎಂದು ಗುರುತಿಸಲಾಯಿತು. ಈ ಪ್ರಕರಣದಲ್ಲಿ ಈ ಹಿಂದೆ ಬೇರೆ ವಕೀಲರು ಕೇಸನ್ನು ನಡೆಸಿರುತ್ತಾರೆ ಎಂದರೆ ಸರಿ. ಅಪೀಲಿನಲ್ಲಿ ನಾನು ಬೇರೆ ವಕೀಲರನ್ನು ನೇಮಕ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ಅಪೀಲಿನಲ್ಲಿ ನಾನೇ ಸ್ವತಃ ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ಮೇಲ್ಮನವಿ ಅರ್ಜಿಯಲ್ಲಿ ಏನು ಬರೆಯಲಾಗಿದೆ ಎಂದು ತಿಳಿದುಕೊಂಡಿರುತ್ತೇನೆ. ಸದರಿ ಮೇಲ್ಮನವಿ ಅರ್ಜಿಯ ತೀರ್ಪಿನಲ್ಲಿ ಯಾವ ಕಾರಣಕ್ಕಾಗಿ ರಿಮ್ಯಾಂಡ್ ಬಂದಿರುತ್ತದೆ ಎಂದು ತಿಳಿದುಕೊಂಡಿರುತ್ತೇನೆ. ಸಾಕ್ಷಿಗೆ ಕ್ರಿಮಿನಲ್ ಅಪೀಲು ಸಂಖ್ಯೆಃ 10033/2023 ಪ್ರಕರಣದಲ್ಲಿ ಸಲ್ಲಿಸಿದ ಕಲಂ.391 ದಂ.ಪ್ರ.ಸಂಹಿತೆ ಅರ್ಜಿಯನ್ನು ತೋರಿಸಲಾಗಿ ಅದನ್ನು ನಿಪಿ.9 ಎಂದು ಗುರುತಿಸಲಾಯಿತು. ಸದರಿ ಅರ್ಜಿಯನ್ನು ನಾನೇ ಸಲ್ಲಿಸಿರುತ್ತೇನೆ. ಅದರಲ್ಲಿರುವ ಸಂಗತಿಗಳು ನನಗೆ ತಿಳಿದಿದೆ. ಸದರಿ ನಿಪಿ.9 ಅರ್ಜಿಯಲ್ಲಿ ಬರೆದಿರುವ ಸಂಗತಿ ಸರಿ ಇದೆ. ಅದರಲ್ಲಿ ಫಿರ್ಯಾದುದಾರರು ಎಂದು ನಮೂದು ಮಾಡಿರುವ ವ್ಯಕ್ತಿಯು ಫಿರ್ಯಾದುದಾರನ ಭಾಮೈದ ಆಗಿರುತ್ತಾನೆ. ಸದರಿ ಅರ್ಜಿಯಲ್ಲಿ ಸ್ಪಷ್ಟವಾಗಿ CCNo.2352/2015 ರ ಫಿರ್ಯಾದುದಾರರು ಒಪ್ಪಿಕೊಂಡು ಸಹಿ ಮಾಡಿರುತ್ತಾರೆ ಎಂದು ನಮೂದು ಮಾಡಿರುವುದು ಸರಿ. ನಿಡಿ.1 ದಾಖಲಾತಿಯಲ್ಲಿ ಈ ಪ್ರಕರಣದ ಫಿರ್ಯಾದಿಯು ಎಲ್ಲೂ ಕೂಡ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಆದರೆ ಆ ದಿನ ಆತನು ಬಂದಿದ್ದನು. ಈ ಪ್ರಕರಣದ ಫಿರ್ಯಾದಿಯು ಹಾಗೂ ನಿಡಿ.1 ಚಿಕ್ಕಮಗಳೂರು ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಜಿಲ್ಲಾ ನ್ಯಾಯಾಲಯದ ಮುಂದೆ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.7 ಕ್ಕೂ ಫಿರ್ಯಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಫಿರ್ಯಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಹಾಗೂ ಕಾಲಹರಣ ಮಾಡುವ ಉದ್ದೇಶದಿಂದ ನಿಪಿ.9 ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಫಿರ್ಯಾದುದಾರರಿಗೆ ಚೆಕ್ಕಿನ ಮೊತ್ತವನ್ನು ಕೊಡಲು ಬಾಧ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ : ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಸಹಿ/-**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು**